/krishijagran @krishijagran 9891405403 www.krishijagran.com
ISSN 2455-1104

# ಕೃಷಿ ಜಾಗರಣ

ಕೃಷಿ ಲಾಭಕ್ಕಾಗಿ ದೇಶಾದ್ಯಂತ ನಮ್ಮ ಪ್ರಯತ್ನ ನಡೆದಿದೆ

KANNADA - Volume 9 • Issue 02 • February, 2022 • Rs. 50

ACF GLOBAL BUSINESS MEET AND AWARDS

## ಪೌಷ್ಟಿಕಾಂಶ ಭರಿತ ಕಿರುಧಾನ್ಯಗಳ ಮಹತ್ವ ಹಾಗೂ ಮೌಲ್ಯವರ್ಧನೆ





# ಗುಡಿಸಲಿನಲ್ಲಿ ವಾಸಿಸುವ ನಿಂಬೆ ನಾಡಿನ ಹೆಮ್ಮೆಯ ಕೋಟ್ಯಾಧಿಪತಿ ಈ ರೈತ!

ಹೀನಾ ಎಮ್. ಎಸ್., ಪ್ರೇಮಾ ಬಿ ಪಾಟೀಲ್,
ಮಜೀದ ಜಿ., ಸವಿತಾ ಬಿ ಮತ್ತು ಸಂತೋಷ ಶಿಂಧೆ
ಕೃಷಿ ವಿಜ್ಞಾನ ಕೇಂದ್ರ, ಇಂಡಿ (ಕೃಷಿ ವಿಶ್ವ ವಿದ್ಯಾಲಯ, ಧಾರವಾಡ)

ಭಾರತ ಕೃಷಿ ಪ್ರಧಾನ ದೇಶವಾಗಿದೆ. ಆದರೆ ಇಲ್ಲಿ ರೈತರು ಅನೇಕ ಸಂಕಷ್ಟಗಳನ್ನು ಎದುರಿಸುತ್ತಾರೆ. ಆದಾಯಕ್ಕಿಂತ ಖರ್ಚು ಹೆಚ್ಚು, ಬೆಳೆದ ಬೆಳೆಗೆ ಸೂಕ್ತ ದರವೂ ಸಿಗದೆ ಸಾಲಗಾರರಾಗುತ್ತಿದ್ದಾರೆ. ಆದರೇ ಇಲ್ಲೊಬ್ಬ ರೈತರು ಸದಾ ಕ್ರಿಯಾಶೀಲನಾಗಿ, ಆದರ್ಶ ರೈತನಾಗಿ, ಸಮಾಜಕ್ಕೆ ಹಾಗೂ ಕೃಷಿ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಗಳನ್ನು ಕೊಟ್ಟಿರುತ್ತಾರೆ. ಅವರೇ ಬಿಜಾಪೂರ ಜಿಲ್ಲೆ ಇಂಡಿ ತಾಲೂಕಿನ ತಾಂಬಾ ಗ್ರಾಮದ ಶ್ರೀ ಬೀರಪ್ಪ ಚಿನ್ನಪ್ಪ ವಗ್ಗಿಯವರು.

ಬೀರಪ್ಪನವರ ತಂದೆ ಚಿನ್ನಪ್ಪ ಮತ್ತು ಭೀಮವ್ವ ದಂಪತಿಗಳಿಗೆ ಒಟ್ಟು 7 ಜನ ಗಂಡು ಮಕ್ಕಳು ಮತ್ತು 2 ಜನ ಹೆಣ್ಣು ಮಕ್ಕಳು. ಅವರಿಗೆ ಪೂರ್ವಜರಿಂದ ಕೇವಲ 3 ಎಕರೆ ಜಮೀನು ಬಂದಿರುವುದು. ಬಹಳ ಕಷ್ಟದ ಜೀವನ, ಹೊಲದಲ್ಲಿ ಒಂದು ಸಣ್ಣ ಗುಡಿಸಿಲು ಹಾಕಿಕೊಂಡು ಜೀವನ ಆರಂಭಿಸಿದ ಚಿನ್ನಪ್ಪ ಮತ್ತು ಭೀಮವ್ವ ದಂಪತಿಗಳ ಮಕ್ಕಳ ಪೈಕಿ ಎರಡನೇ ಪುತ್ರ ಬೀರಪ್ಪ ಮತ್ತು ಮೂರನೆಯ ಪುತ್ರ ಬಸಪ್ಪ ಕೃಷಿಯಲ್ಲಿ ಆಸಕ್ತಿ ಹೊಂದಿದ್ದರಿಂದ ಕೃಷಿ ಕಾಯಕಕ್ಕೆ ಬಂದರು. ಚಿನ್ನಪ್ಪ ತಮ್ಮ ಮನೆತನ ನಿರ್ವಹಣೆಯ ಜವಾಬ್ದಾರಿಯನ್ನು ಬೀರಪ್ಪನವರಿಗೆ ವಹಿಸಿಕೊಟ್ಟರು. ತದನಂತರ 1975 ರಲ್ಲಿ 6 ಎಕರೆ ಜಮೀನು ಖರೀದಿಸಲು ಅರಂಭಿಸಿದ ವಗ್ಗಿ ಸಹೋದರರು ತಮ್ಮ ಶ್ರಮದಿಂದ ಇಂದು 120 ಎಕರೆ ಜಮೀನಿನ ಒಡೆಯರಾಗಿದ್ದಾರೆ.



ಬೀರಪ್ಪ ವಗ್ಗಿಯವರು ತಮ್ಮ ತೋಟದಲ್ಲಿ ಎಲ್ಲಾ ವಿಧದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅವುಗಳಲ್ಲಿ ವಿಶೇಷವಾಗಿ ಲಿಂಬು, ದ್ರಾಕ್ಷಿ, ಕಬ್ಬು, ಈರುಳ್ಳಿ, ಹತ್ತಿ, ಗೋವಿನ ಜೋಳ, ತೊಗರಿ, ನವಣೆ, ಶೇಂಗಾ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದು, ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ. ಮಳೆ ಆಶ್ರಿತ ಬೆಳೆಗಳಾದ ಜೋಳ, ಗೋಧಿ, ನವಣೆ, ಸಜ್ಜೆ, ಸೂರ್ಯಕಾಂತಿ, ತೊಗರಿ ಮುಂತಾದವುಗಳನ್ನು ಸಹ ಬೆಳೆಯುತ್ತಿದ್ದಾರೆ.

### ಬೀರಪ್ಪನವರ ಕೈಹಿಡಿದ ಲಿಂಬೆ

ಬೀರಪ್ಪ ವಗ್ಗಿಯವರು ತಮ್ಮ ಸಹೋದರರೊಂದಿಗೆ 1984 ರಿಂದ ಲಿಂಬು ಸಸಿಗಳನ್ನು ಉತ್ಪಾದಿಸುವ ಮತ್ತು ಮಾರಾಟ ಮಾಡುವ ಕಾಯಕದಲ್ಲಿ ತೊಡಗಿದ್ದಾರೆ. ವಿಜಯಪುರ ಜಿಲ್ಲೆ ಇಂಡಿ ತಾಲೂಕು ಲಿಂಬು ಬೆಳೆಗೆ ಪ್ರಸಿದ್ಧವಾಗಿದೆ. ಇವರು ಉತ್ಪಾದಿಸಿದ ಗುಣಮಟ್ಟದ ಲಿಂಬು ಸಸಿಗಳಿಗೆ ಉತ್ತರ ಕರ್ನಾಟಕದ 7-8 ಜಿಲ್ಲೆಗಳಲ್ಲಿ ಮತ್ತು ನೆರೆಯ ರಾಜ್ಯಗಳಿಂದಲೂ ಒಳ್ಳೆಯ ಬೇಡಿಕೆ ಇದೆ. ಶ್ರೀಯುತರ ತೋಟದಲ್ಲಿ ಸುಮಾರು 1200 ಲಿಂಬು ಗಿಡಗಳಿದ್ದು, ಲಿಂಬೆಕಾಯಿ ಮಾರಾಟದಲ್ಲಿ ಪ್ರಮುಖರಾಗಿದ್ದಾರೆ. ಲಿಂಬು ಬೆಳೆಯಲ್ಲಿ ಮಾಡಿರುವ ಸಾಧನೆಯನ್ನು ಪರಿಗಣಿಸಿ, ಕರ್ನಾಟಕ ಸರಕಾರ ಲಿಂಬು ಅಭಿವೃದ್ಧಿ ಮಂಡಳಿಯ ಸದಸ್ಯರನ್ನಾಗಿ ಆಯ್ಕೆ ಮಾಡಿದೆ. ಇವರು ಲಿಂಬು ಬೆಳೆಯಿಂದ ಅತ್ಯಧಿಕ ಆದಾಯ ಗಳಿಸುತ್ತಿದ್ದಾರೆ.

ಲಿಂಬೆ ಸಸಿಗಳೊಂದಿಗೆ ಕರಿಬೇವು, ಮಾವು, ಪೇರಲ, ಹಲಸು, ಸೀತಾಫಲ ಮುಂತಾದ ಸಸಿಗಳನ್ನೂ ಕೂಡ ಉತ್ಪಾದಿಸಿ ಮಾರಾಟ ಮಾಡುತ್ತಿದ್ದಾರೆ. ಬೀರಪ್ಪ ವಗ್ಗಿಯವರು ತಮ್ಮತೋಟದಲ್ಲಿ ಇತ್ತೀಚೆಗೆ ದ್ರಾಕ್ಷಿ ಬೆಳೆಯಲಾರಂಭಿಸಿದ್ದಾರೆ. ಉತ್ಪಾದಿಸಿದ ದ್ರಾಕ್ಷಿ ಫಸಲಿನಿಂದ ಒಣದ್ರಾಕ್ಷಿ ತಯಾರಿಸಿ, ಗ್ರೇಡಿಂಗ್ ಮಾಡಿ, ಮಾರಾಟಕ್ಕೆ ಮಹಾರಾಷ್ಟ್ರದ ತಾಜಗಾಂವಗೆ ಕಳುಹಿಸುತ್ತಾರೆ.

### ತೋಟಗಾರಿಕೆ ಬೆಳೆಗಳಲ್ಲೂ ಸೈ

ಅಷ್ಟೆ ಅಲ್ಲದೇ ತೋಟದಲ್ಲಿ ಅನೇಕ ತರಹದ ಹೂವಿನ ಗಿಡಗಳಿದ್ದು ಅವು ತೋಟದ ಸೌಂದರ್ಯವನ್ನು ಹೆಚ್ಚಿಸಿವೆ. ಅಲ್ಲದೇ 50 ಮಾವು, 50 ಗೊಡಂಬಿ, 2 ಖರ್ಜೂರ, 2 ಅಡಿಕೆ, 20 ಸೀತಾಫಲ, 2 ರಾಮಫಲ, 2 ಲಕ್ಷಣಫಲ, 25 ಬಾರಿ, 2 ಅಂಜೂರ, 6 ಹುಣಸೆ, 40 ತೆಂಗು, 100 ಬಾಳೆ, 1 ಹಲಸು, 2 ಸೇಬು, 2 ಯ್ಯಾಪಲ್ ಬಾರಿ, 2 ಸೂಜಿ ಲಿಂಬು, 2 ಕಂಚಿ, 4 ನೇರಳೆ ಮುಂತಾದ ಹಣ್ಣಿನ ಗಿಡಗಳನ್ನು ಬೆಳೆಸಲಾಗಿದ್ದು, ಅವು ಸದ್ಯ ಫಲ ನೀಡುತ್ತಿವೆ.

### ಮಸಾಲೆ ಬೆಳೆ ಮತ್ತು ಔಷಧಿ ಬೆಳೆ

ಬೀರಪ್ಪ ವಗ್ಗಿಯವರು ಪ್ರಾಯೋಗಿಕವಾಗಿ ಕೆಲವು ಮಸಾಲೆ ಬೆಳೆಗಳಾದ ಕಾಳು ಮೆಣಸು, ದಾಲಚಿನ್ನಿ, ಚಕ್ರಮೊಗ್ಗು, ಯಾಲಕ್ಕಿ, ಲವಂಗ ಮುಂತಾದವುಗಳನ್ನು ಬೆಳೆದಿರುವುದು ವಿಶೇಷವಾಗಿದೆ. ಅಶ್ವಗಂಧ, ಶತಾವರಿ, ಈಶ್ವರ ಬಳ್ಳಿ, ಶಂಖ ಪುಷ್ಪ ಅಡಸೋಗಿ, ಒಳ ಮುಚಕ,



ಹೊರ ಮುಚಕ, ಕೆಂಪು, ಕರಿ, ಮತ್ತು ಬಿಳಿ ಗುಲಗಂಜಿ ಮುಂತಾದ ಔಷಧಿಯ ಸಸಿಗಳನ್ನು ಸಹ ಬೆಳೆಸಲಾಗಿದೆ. ಸಂದರ್ಭಾನುಸಾರ ಅವುಗಳನ್ನು ಔಷಧಿಯ ರೂಪದಲ್ಲಿ ದನ-ಕರುಗಳಿಗೆ ಬಳಸುತ್ತಿದ್ದಾರೆ. ಬೀರಪ್ಪ ವಗ್ಗಿಯವರು ವಿವಿಧ ಬೆಳೆಗಳನ್ನು ಬೆಳೆಯುವುದು ಅಷ್ಟೇ ಅಲ್ಲದೇ, ಉತ್ತಮ ಗುಣಮಟ್ಟದ ಬೀಜಗಳನ್ನು ಉತ್ಪಾದಿಸಿ ಮಾರಾಟ ಮಾಡಿ ಆದಾಯ ಗಳಿಸುತ್ತಿದ್ದಾರೆ.

ನೀರಾವರಿಗಾಗಿ ಒಂದು ಬೃಹದಾಕಾರವಾದ ಅಂದರೆ 110 ಫೂಟ್‌ಉದ್ದ, 110 ಫೂಟ್‌ಅಗಲ ಹಾಗೂ 60 ಫೂಟ್‌ಆಳವಿರುವ ಬಾವಿಯನ್ನು ತೋಡಿಸಿ ಇದರಿಂದ ಸುಮಾರು 70 ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಮಾಡಿಕೊಂಡಿದ್ದಾರೆ, 25-30 ಎಕರೆಗಳಿಗೆ ಹನಿ ನೀರಾವರಿ ವ್ಯವಸ್ಥೆ ಮಾಡಿಕೊಂಡು, ಎರಡು ಬೃಹದಾಕಾರದ ವಾಟರ್ ಪ್ಯೂರಿಫಾಯರ್ ಮಶಿನ್ಗಳನ್ನು ಅಳವಡಿಸಿದ್ದು, ಶುದ್ಧ ನೀರು ಎಲ್ಲ ಬೆಳೆಗಳಿಗೂ ಪೂರೈಸುತ್ತಿದ್ದಾರೆ.

### ಪಶುಪಾಲನೆಯಲ್ಲೂ ಎತ್ತಿದ ಕೈ

ವಗ್ಗಿಯವರು ತಮ್ಮ ಜಮೀನಿನಲ್ಲಿ ಎರಡು ಎತ್ತು, 30 ಆಕಳು, 8 ಎಮ್ಮೆಗಳು, 50 ಮೇಕೆಗಳು, 50 ಕೋಳಿಗಳನ್ನು ಸಾಕಿದ್ದಾರೆ. ದನಕರುಗಳ ಸೆಗಣಿ, ಗಂಜಲು ಮತ್ತು ಕೃಷಿ ತ್ಯಾಜ್ಯಗಳನ್ನು ಮಿಶ್ರಣ ಮಾಡಿ ತಿಪ್ಪೆಗೆ ಹಾಕಿ ವಾರ್ಷಿಕ ಸಾವಿರಾರು ಟ್ರ್ಯಾಕ್ಟರ್‌ಗೊಬ್ಬರವನ್ನು ಉತ್ಪಾದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೇ ಗೋ ಮೂತ್ರವನ್ನು ಬಳಸಿ ಜೀವಾಮೃತ ತಯಾರಿಸಿ ಬೆಳೆಗಳಿಗೆ ಬಳಸುತ್ತಾರೆ. ಸುಧಾರಿತ ಒಕ್ಕಲುತನಕ್ಕೆ ಇಂದು ಯಂತ್ರಗಳ ಬಳಕೆ ಅನಿವಾರ್ಯವಾಗಿದೆ ಎಂದರೆ ತಪ್ಪಾಗಲಾರದು. ಬೀರಪ್ಪ ವಗ್ಗಿಯವರು ಕೃಷಿ ಕ್ಷೇತ್ರದ ನಿರ್ವಹಣೆಗಾಗಿ ಅವಶ್ಯಕತೆ ಇದ್ದಲ್ಲಿ ಯಂತ್ರೋಪಕರಣಗಳನ್ನು ಬಳಸಿ ಆಳು ಮತ್ತು ಸಮಯದ ಉಳಿತಾಯ ಮಾಡುತ್ತಾರೆ. ಕೃಷಿ ಕೆಲಸಕ್ಕೆ ಮಾಲೀಕರು ಮತ್ತು ಆಳುಗಳೆಂಬ ಭೇದವಿಲ್ಲ "ಆಳಾಗಿ ದುಡಿ, ಅರಸನಾಗಿ ಉಣ್ಣು" ಎನ್ನುವ ಗಾದೆಮಾತಿನಂತೆ ಆಳುಗಳೊಂದಿಗೆ ಈ ಅವಿಭಕ್ತಕುಟುಂಬದ ಪುರುಷರು ಮತ್ತು ಮಹಿಳೆಯರು ಕೃಷಿ ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ.

ಕೃಷಿಯಲ್ಲಿ ಅವಿಷ್ಕಾರ ಮಾಡಲು ಉತ್ಸುಕರಾಗಿರುವ ಬೀರಪ್ಪ ವಗ್ಗಿಯವರು ಆಗಾಗ ಕೃಷಿ ವಿಜ್ಞಾನ ಕೇಂದ್ರ, ಇಂಡಿಗೆ ಭೇಟಿ ನೀಡಿ ಹೊಸ ವಿಷಯಗಳನ್ನು ತಿಳಿದುಕೊಳ್ಳುತ್ತಾರೆ. ಅಧಿಕ ಇಳುವರಿ, ಗುಣಮಟ್ಟದ ಇಳುವರಿ ಪಡೆಯಲು ಮತ್ತು ಮಾರಾಟದಲ್ಲಿ ಕೈಕೊಳ್ಳಬೇಕಾದ ಸುಧಾರಣಾ ಕ್ರಮಗಳ ಕುರಿತು ವಿಜ್ಞಾನಿಗಳೊಂದಿಗೆ ಚರ್ಚಿಸುವ ಇವರು ಸದಾ ಕೃಷಿ ವಿಜ್ಞಾನ ಕೇಂದ್ರದ ಸಂಪರ್ಕದಲ್ಲಿದ್ದು, ಇವರು ವೈಜ್ಞಾನಿಕ ಕೃಷಿ ಮಾಡುತ್ತಿದ್ದಾರೆ.

ಬೆಳೆ ನಾಟಿ ಮಾಡುವ ಮೊದಲು ಬೀಜವನ್ನು ಉತ್ತಮ ರೀತಿಯಲ್ಲಿ ಬೀಜೋಪಚಾರ ಮಾಡಿ ಹೊಲದಲ್ಲಿ ಬಿತ್ತುವುದು ಅಥವಾ ನಾಟಿ ಮಾಡುವುದು, ಅವಶ್ಯಕತೆಗೆ ತಕ್ಕಂತೆ ಕಳೆ ತೆಗೆಯುವದು, ಕ್ರಿಮಿನಾಶಕಗಳನ್ನು ಸಿಂಪರಣೆ ಮಾಡಿ ಬೆಳೆಯ ಗುಣಮಟ್ಟ ನಿರ್ವಹಿಸಲಾಗುತ್ತಿದೆ. ತೋಟದಲ್ಲಿ ಉತ್ಪತ್ತಿಯಾದ ಯಾವುದೇ ಫಸಲು ಮಾರುಕಟ್ಟೆಗೆ ಕಳುಹಿಸುವ ಮೊದಲು ಅವುಗಳನ್ನು ಗುಣಮಟ್ಟದ ಅನುಸಾರ ವಿಂಗಡಿಸಲಾಗುತ್ತಿದೆ. ಹೀಗೆ ವಿಂಗಡಿಸಿ ಮಾರುಕಟ್ಟೆಗೆ ಕಳುಹಿಸಿದ ಉತ್ಪನ್ನಗಳಿಗೆ ಉತ್ತಮ ಬೆಲೆ ನಿಶ್ಚಿತವಾಗಿ ದೊರೆಯುತ್ತಿದೆ. ಬೀಜ ಮತ್ತು ಸಸಿಗಳನ್ನು ಮಾರಾಟ ಮಾಡುವ ಮೊದಲು ಪ್ರಾಯೋಗಿಕವಾಗಿ ಅವುಗಳನ್ನು ತಮ್ಮ ತೋಟದಲ್ಲಿ ನಾಟಿ ಮಾಡಿ ಖಾತ್ರಿ ಪಡಿಸಿಕೊಂಡು ಮಾರಾಟ ಮಾಡುತ್ತಾರೆ.

ವಿಜ್ಞಾನಿಗಳು ನೀಡಿದ ಸಲಹೆಗಳನ್ನು ಪಾಲಿಸುತ್ತಾರೆ. ಅಲ್ಲದೇ ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ. ಕೃಷಿ ವಿಜ್ಞಾನ ಕೇಂದ್ರದಿಂದ ನೀಡುವ ನೂತನ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಯನ್ನು ತಮ್ಮ ಹೊಲದಲ್ಲಿ ಕೈಗೊಳ್ಳಲು ಸದಾ ಮುಂದಿರುವ ಇವರು, ಇತರೆ ರೈತರಿಗೆ ಮಾದರಿಯಾಗಿದ್ದಾರೆ. ಕೃಷಿ ವಿಜ್ಞಾನ ಕೇಂದ್ರದಿಂದ ಇವರು ಜವೆಗೋಧಿ, ಬಿಳಿ ಜೋಳ ಮತ್ತು ನವಣೆ ಬೆಳೆಯ ಪ್ರಾತ್ಯಕ್ಷಿಕೆಯನ್ನು ಕೈಗೊಂಡು ಕ್ಷೇತ್ರೋತ್ಸವದ ಮುಖಾಂತರ ಸುತ್ತ-ಮುತ್ತಲಿನ ರೈತರಿಗೆ ತಿಳುವಳಿಕೆಗಳನ್ನು ನೀಡಿದ್ದಾರೆ ಮತ್ತು ಈ ವರ್ಷ ಗುಲಾಬಿಯ ಹೊಸ ತಳಿ ಅರ್ಕಾ ಸವಿಯ ಪ್ರಾತ್ಯಕ್ಷಿಕೆಯನ್ನು ಕೈಗೊಂಡಿದ್ದಾರೆ.



## STATEMENT OF OWNERSHIP FORM IV

**1. Place of Publication :**
Address : 60/9, 3rd Floor, Yusuf Sarai Market,
Near Green Park Metro Station,
New Delhi-110016

**2. Periodicity : Monthly**

**3. Printer's Name : M C Dominic**
Citizen of India : Yes
Address : E-20, Green Park Extn. New Delhi-110016

**4. Publishers Name :**
M C Dominic
Citizen of India : Yes
Address : E-20, Green Park Extn.
New Delhi-110016

**5. Editor Name :**
M C Dominic
Citizen of India : Yes
Address : E-20, Green Park Extn.
New Delhi-110016

**6. Name & Address of Owner :**
M C Dominic
Citizen of India : Yes
Address : E-20, Green Park Extn.
New Delhi-110016

I, M C Dominic, hereby declare that the particulars given above are true of the best of my knowledge and belief

Sd/-M C Dominic
Signature of Publisher
Dated : 1st March 2023

ತೋಟಕ್ಕೆ ಭೇಟಿ ನೀಡಿದ ಕೃಷಿ ವಿಜ್ಞಾನ ಕೇಂದ್ರ ಇಂಡಿಯ ವಿಜ್ಞಾನಿಗಳು

ಬೀರಪ್ಪ ವಗ್ಗಿ ಮತ್ತು ಸಹೋದರರು ಮಾಡಿರುವ ಕೃಷಿ ಸಾಧನೆಯನ್ನು ಗುರುತಿಸಿದ ಅನೇಕ ಸಂಘ-ಸಂಸ್ಥೆಗಳು ಮತ್ತು ಸರ್ಕಾರ ಅವರಿಗೆ ಪ್ರಶಸ್ತಿ ಮತ್ತು ಪುರಸ್ಕಾರಗಳನ್ನು ನೀಡಿ ಗೌರವಿಸಿವೆ.

ಇವರಿಗೆ ಸಂದ ಕೆಲವು ಪ್ರಶಸ್ತಿ - ಪುರಸ್ಕಾರಗಳು

- 2013-14 ನೇ ಸಾಲಿನಲ್ಲಿ ಸಾವಯವ ಕೃಷಿಕ ಪ್ರಶಸ್ತಿ
- 2019ರಲ್ಲಿ ಕರ್ನಾಟಕ ಕೃಷಿ ಚೇತನ ಪ್ರಶಸ್ತಿ
- 2019ರಲ್ಲಿ ಗಡಿನಾಡು ಕಲಾರತ್ನ ಪ್ರಶಸ್ತಿ
- 2020 ನೇ ಸಾಲಿನ ಶ್ರೀ ಸಿದ್ದೇಶ್ವರ ರತ್ನ ಪ್ರಶಸ್ತಿ
- ವಿಜಯ ಕರ್ನಾಟಕ ಪತ್ರಿಕೆಯಿಂದ ವಿಕೆ ಸೂಪರ್ ಸ್ಟಾರ್ ರೈತ
- ರಾಜ್ಯದ ಪ್ರತಿಷ್ಠಿತ ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವರು 2018-19 ನೇ ಸಾಲಿನ ಜಿಲ್ಲಾ ಶ್ರೇಷ್ಠ ಕೃಷಿಕ ಪ್ರಶಸ್ತಿ ನೀಡಿ ಗೌರವಿಸಿದೆ
- 2021 ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ಇಂಡಿಯಲ್ಲಿ ಮತ್ತು ರಾಜ್ಯ ಮಟ್ಟದ ವಿಕೆ ಸೂಪರ್ ಸ್ಟಾರ್ ರೈತ 2021ರ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ
- ಭಾವೈಕ್ಯ ಸಿರಿ ರಾಜ್ಯ ಪ್ರಶಸ್ತಿ-2021
- ಜೀವನಾಡಿ ರತ್ನರಾಜ್ಯ ಪ್ರಶಸ್ತಿ 2022 ಪಡೆದಿರುತ್ತಾರೆ
- ಕೃಷಿ ವಿಜ್ಞಾನ ಕೇಂದ್ರ ಇಂಡಿಯವರು ಈ ಭಾಗದ ಅವಿಷ್ಕಾರಿ ರೈತ ಎಂದು ಆಯ್ಕೆ ಮಾಡಿದ್ದು

2022ನೇ ಸಾಲಿನ ಧಾರವಾಡ ಕೃಷಿ ಮೇಳದಲ್ಲಿ ಭಾಗವಹಿಸಿ ತಮ್ಮ ಅವಿಷ್ಕಾರಗಳ ಕುರಿತು ನೆರೆದ ರೈತರಿಗೆ ಮಾಹಿತಿ ನೀಡಿರುತ್ತಾರೆ. ಇವರ ಈ ಸಾಧನೆಗಳನ್ನು ವೀಕ್ಷಿಸಲು ಮತ್ತು ಕೃಷಿ ಅಧ್ಯಯನ ಮಾಡಲು ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಆಗಾಗ್ಗೆ ತೋಟಕ್ಕೆ ಭೇಟಿ ನೀಡುತ್ತಾರೆ ಮತ್ತು ಆಸಕ್ತ ರೈತರು ಇವರ ತೋಟಕ್ಕೆ ಭೇಟಿ ನಿಡುವುದು ವಿಶೇಷವಾಗಿದೆ.

"ಕುಲಪತಿಗಳ ನಡೆ ರೈತರ ಕಡೆ" ಎಂಬ ವಿಶೇಷ ಕಾರ್ಯಕ್ರಮದಡಿಯಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ವಿಜ್ಞಾನಿಗಳು ಬೀರಪ್ಪ ವಗ್ಗಿಯವರ ತೋಟಕ್ಕೆ ಭೇಟಿ ನೀಡಿ ಕೃಷಿ ಕ್ಷೇತ್ರದಲ್ಲಿ ಇವರು ಮಾಡುತ್ತಿರುವ ಅದ್ಭುತ ಸಾಧನೆಯನ್ನು ಶ್ಲಾಘಿಸಿದ್ದಾರೆ.



ತೋಟಕ್ಕೆ ಭೇಟಿ ನೀಡಿದ ಕೃ.ವಿ.ವಿ. ಕುಲಪತಿಗಳು ಮತ್ತು ಕೃ.ವಿ.ವಿ ವಿಜ್ಞಾನಿಗಳು

**ರೈತ ವಗ್ಗಿಯವರ ಖರ್ಚು ಮತ್ತು ಆದಾಯದ ವಿವರ:**

| ಕ್ರ.ಸಂ. | ಬೆಳೆ ವಿಸ್ತೀರ್ಣ | ಎಕರೆ | ಖರ್ಚು | ಆದಾಯ |
|---|---|---|---|---|
| 1 | ಲಿಂಬೆ | 15 | 3,75,000 | 22,14,000 |
| 2 | ದ್ರಾಕ್ಷಿ | 06 | 4,80,000 | 32,40,000 |
| 3 | ತೊಗರಿ | 30 | 2,56,500 | 14,40,000 |
| 4 | ಕಡ್ಲೆ | 30 | 1,86,000 | 12,36,000 |
| 5 | ಜೋಳ | 12 | 43,200 | 1,26,720 |
| 6 | ಉಳ್ಳಾಗಡ್ಡಿ | 10 | 2,50,000 | 9,60,000 |
| 7 | ಲಿಂಬೆ ಮತ್ತು ಹಣ್ಣಿನ ಬೆಳೆಗಳ ನರ್ಸರಿ | 05 | 10,00,000 | 40,00,000 |
| 8 | ಪಶುಸಂಗೋಪನೆ | - | 2,00,000 | 5,00,000 |
| 9 | ಮೇವು ಮತ್ತು ಇತರೆ ಬೆಳೆಗಳು | 12 | 2,00,000 | 3,00,000 |
| * | ಒಟ್ಟು | 120 | 29,90,700 | 1,40,16,720 |
| * | ನಿವ್ವಳ ಆದಾಯ | 1,10,26,000 | | |

ವಗ್ಗಿಯವರ ವಾರ್ಷಿಕ ಆದಾಯ 1,10,26,000 ರೂಪಾಯಿಯಾದರೂ ಗುಡಿಸಿಲಲ್ಲೇ ವಾಸಿಸುವ ಇವರು ಇತರರಿಗೆ ಮಾದರಿಯಾಗಿದ್ದಾರೆ. ಕೃಷಿ ಲಾಭದಾಯಕವಲ್ಲ ಎಂದು ಪಟ್ಟಣದ ಕಡೆ ಮುಖ ಮಾಡುವ ಯುವಕರಿಗೆ ಶ್ರಮಪಟ್ಟರೆ ಏನು ಬೇಕಾದರೂ ಸಾಧಿಸಬಹುದು, ಭೂಮಿ ತಾಯಿಯನ್ನು ನಂಬಿದರೆ ನಮಗೆ ಯಾವತ್ತಿಗೂ ಅದು ದ್ರೋಹವಾಗುವುದಿಲ್ಲ ಎಂದು ತೋರಿಸಿ ಕೊಟ್ಟಿರುವ ಇವರು ಇಂದಿನ ಯುವ ಪೀಳಿಗೆಗೆ ಪ್ರೇರಣೆಯಾಗಿದ್ದಾರೆ ಮತ್ತು ನೌಕರಿಯಿಂದ ಮಾತ್ರವಲ್ಲ ಒಕ್ಕಲುತನದಿಂದ ಕೂಡ ಬೇಕಾದಷ್ಟು ಸಾಧನೆ ಮಾಡಬಹುದು ಎಂಬ ಮಾದರಿಯನ್ನು ನಮ್ಮ ಮುಂದಿಟ್ಟಿದ್ದಾರೆ.